# ಕರ್ನಾಟಕ ಸರ್ಕಾರ
# ಕರ್ನಾಟಕ ನಾಗರಿಕ ಸೇವಾ ಖಾತರಿ ವ್ಯವಸ್ಥೆ
# Karnataka Guarantee of Services to Citizens System

## ಸೇವೆಗಳ ಕಾರ್ಯವಿಧಾನ

| ಇಲಾಖೆಯ ಹೆಸರು | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ |
|---|---|
| ಸೇವೆಯ ಹೆಸರು | ಬಿಡಿಎ ಬಡಾವಣೆಗಳಲ್ಲಿನ ನಿವೇಶನಗಳ ಮತ್ತು ಬಿಡಿಎ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿನ ನಿವೇಶನಗಳ ಉಪ ವಿಭಜನೆ ಮತ್ತು ಸಮಾಮೇಲನಕ್ಕೆ ಅನುಮೋದನೆ ಪಡೆಯುವ ಬಗ್ಗೆ. |
| ಈ ಸೇವೆ ಪಡೆಯಲು ಸಂಪರ್ಕಿಸಬೇಕಾದ ಅಧಿಕಾರಿ (ಹೆಸರಿಸಲಾದ ಅಧಿಕಾರಿ)? | ಜಂಟಿ ನಿರ್ದೇಶಕರು, ನಗರ ಯೋಜನೆ |
| ಈ ಸೇವೆಯಲ್ಲಿ ಒಳಗೊಂಡಿರುವ ಕಾರ್ಯವಿಧಾನ | ಸೂಕ್ತ ದಾಖಲೆಯೊಂದಿಗೆ ಅರ್ಜಿಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಿ ಸ್ವೀಕೃತಿಯನ್ನು ಪಡೆಯತಕ್ಕದ್ದು. ನಂತರ ಅರ್ಜಿಯು ಸಂಬಂಧಪಟ್ಟ ವಿಭಾಗದಲ್ಲಿ ವಿಲೇವಾರಿಯಾಗಿ ಅರ್ಜಿದಾರರಿಗೆ ಈ ಸೇವೆಯ ಬಟವಾಡೆಯಾಗುವುದು. |
| ಈ ಸೇವೆ ಪಡೆಯಲು ನಿಗದಿಪಡಿಸಿರುವ ನಮೂನೆ | |
| ಈ ಸೇವೆಯನ್ನು ಪಡೆಯಲು ಇರುವ ಅರ್ಹತೆ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿತ ನಿವೇಶನಗಳ ಮಾಲೀಕರು. |
| ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು | 1 . ನಿವೇಶನ ಉಪವಿಭಜನೆ ಅಥವ ಸಮಾಮೇಲನಕ್ಕಾಗಿ ಸಾದ ಕಾಗದದಲ್ಲಿ ಅರ್ಜಿಯನ್ನು ಇಲ್ಲಿ ಕಾಣಿಸಿರುವ ದಾಖಲೆಗಳೊಂದಿಗೆ ಸಲ್ಲಿಸುವುದು.<br>2 . ಉದ್ದೇಶಿತ ಉಪ ವಿಭಜನೆ/ಸಮಾಮೇಲನ ನಕ್ಷೆ<br>3 . ಅನ್ವಯವಾಗುವ ಅಗತ್ಯ ಶುಲ್ಕ ವನ್ನು ನಿರ್ದಿಷ್ಟ ಬ್ಯಾಂಕ್ ನಲ್ಲಿ ಪಾವತಿ ಮಾಡಿದ ಚಲನ್ ಅಥವ ಇದೇ ಮೊತ್ತಕ್ಕೆ, ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿನಲ್ಲಿರುವ ಡಿ.ಡಿ.ಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.<br>4 . ಉದ್ದೇಶಿತ ನಿವೇಶನ/ಗಳ ಸ್ಥಳ ನಕ್ಷೆಪ್ರತಿಯನ್ನು ಲಗತ್ತಿಸುವುದು.<br>5 . ನಿವೇಶನ/ಗಳ ಮಾಲೀಕತ್ವದ ಕುರುಹಾಗಿ, ಅವುಗಳ ಶುದ್ಧ ಕ್ರಯಪತ್ರ/ಆರ್.ಟಿ.ಸಿ/ಮ್ಯುಟೇಷನ್ ಪ್ರತಿಯನ್ನು ಲಗತ್ತಿಸುವುದು.<br>6 . ಗ್ರಾಮ ನಕ್ಷೆ ಪ್ರತಿ<br>7 . ಖಾತೆ ಪ್ರಮಾಣ ಪತ್ರ ಪ್ರತಿ<br>8 . ಇತ್ತೀಚಿನ ಕಂದಾಯ ಪಾವತಿಸಿದ ರಸೀದಿ ಪ್ರತಿ<br>9 . ಅನುಮೋದಿಸಿದ ವಿನ್ಯಾಸ ನಕ್ಷೆ ಪ್ರತಿ<br>10 . ಇತ್ತೀಚಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15,16 ರಲ್ಲಿ)ಪ್ರತಿ |
| ಈ ಸೇವೆಯನ್ನು ಪಡೆಯಲು ನಿಗದಿಪಡಿಸಿರುವ ಶುಲ್ಕ | ₹ Betterment levy fee Rs.20 per sq.meter Scrutiny fees Rs.0.50 per sq.meter |
| ಈ ಸೇವೆಯನ್ನು ಪಡೆಯಲು ನಿಗದಿಪಡಿಸಿರುವ ಗರಿಷ್ಟ ಕಾಲಾವಧಿ | 30 ಕೆಲಸದ ದಿನಗಳು |
| ಈ ಸೇವೆಯನ್ನು ನಿಗದಿತ ದಿನಾಂಕದೊಳಗೆ ನೀಡದಿದ್ದಲ್ಲಿ ಅಥವಾ ಇದನ್ನು ತಿರಸ್ಕರಿಸಿದಲ್ಲಿ,ಮೇಲ್ಮನವಿ ಸಲ್ಲಿಸಬೇಕಾದ ಸಕ್ಷಮ ಪ್ರಾಧಿಕಾರಿ ಹೆಸರು | ನಗರ ಯೋಜನಾ ಸದಸ್ಯರು |
| ಸಕ್ಷಮ ಪ್ರಾಧಿಕಾರಿ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ನಿಗದಿಪಡಿಸಿರುವ ಕಾಲಾವಧಿ | 15 ಕೆಲಸದ ದಿನಗಳು |
| ಸಕ್ಷಮ ಪ್ರಾಧಿಕಾರಿ ಮೇಲ್ಮನವಿಯನ್ನು ನಿಗದಿತ ದಿನಾಂಕದೊಳಗೆ ಇತ್ಯರ್ಥಪಡಿಸದಿದ್ದಲ್ಲಿ ಅಥವಾ ಸಕ್ಷಮ ಪ್ರಾಧಿಕಾರಿಯ ತೀರ್ಮಾನವನ್ನು ಒಪ್ಪದಿದ್ದಲ್ಲಿ ಎರಡನೇ ಮೇಲ್ಮನವಿ ಸಲ್ಲಿಸಬೇಕಾದ ಪ್ರಾಧಿಕಾರಿ ಹೆಸರು | ಆಯುಕ್ತರು |
| ಎರಡನೇ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ನಿಗದಿಪಡಿಸಿರುವ ಕಾಲಾವಧಿ | 15 ಕೆಲಸದ ದಿನಗಳು |
| ಇತರೆ ವಿಷಯಗಳು | www.bdabangalore.org |
| ಅಂತರಜಾಲಾ (ಆನ್ಲೈನ್ ಇದ್ದರೆ) | |
| ಉಲ್ಲೇಖಿಸುವ ದಸ್ತಾವೇಜು | |

### ಕಾರ್ಯ ಹರಿವು

| ಹೆಜ್ಜೆ | ವಿವರಣೆ | ದಿವಸಗಳು | ಹುದ್ದೆ |
|---|---|---|---|
| 1 | ಈ ಸೇವೆಗಾಗಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪ್ರಾಧಿಕಾರದ ಜಂಟಿ ನಿರ್ದೇಶಕರು, ನಗರ ಯೋಜನಾ ವಿಭಾಗದಲ್ಲಿ ತಮ್ಮ ಅರ್ಜಿಯನ್ನು ಸಲ್ಲಿಸಬೇಕು. | 1.00 | ಜಂಟಿ ನಿರ್ದೇಶಕರು |
| 2 | ಸ್ವೀಕೃತಿಯಾದ ಅರ್ಜಿಯನ್ನು ಪದನಿಮಿತ್ತ/ಸಂಬಂಧಪಟ್ಟ ನಗರ ಯೋಜನಾ ಅಧಿಕಾರಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸುವರು | 2.00 | ನಗರ ಯೋಜಕರು |
| 3 | ಅರ್ಜಿದಾರರ ಕೋರಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಉಪ ನಿರ್ದೇಶಕರು, ನಗರ ಯೋಜನೆ ಇವರು, ಭೂ ಹಂಚಿಕೆ / ಪ್ರಸ್ತುತ ಭೂ ಉಪಯೋಗದ ನಿಖರವಾದ ಮಾಹಿತಿಯನ್ನು ಕೋರಿ; ಹಂಚಿಕೆ ವಿಭಾಗ / ವಿಭಾಗೀಯ ಕಾರ್ಯಪಾಲಕ ಅಭಿಯಂತರರನ್ನು ಕೋರಿ ಅರ್ಜಿಯನ್ನು ಕಳುಹಿಸುತ್ತಾರೆ. | 2.00 | ನಗರ ಯೋಜಕರು |

| | | | |
|---|---|---|---|
| 4 | ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ಮೂಲ ನಿವೇಶನವಾದರೆ ಸಂಬಂಧಿತ ಮಾಹಿತಿಯನ್ನು ಹಂಚಿಕೆ ವಿಭಾಗದಿಂದ ಪಡೆಯಲಾಗುವುದು. ಪ್ರಾಧಿಕಾರದಿಂದ ಮಂಜೂರು ಮಾಡಿದ ಖಾಸಗಿ ಬಡಾವಣೆಯಾಗಿದ್ದಲ್ಲಿ, ಮಂಜೂರಾತಿಯಾಗಿರುವ ಮಾಹಿತಿಯನ್ನು ಸಂಬಂಧಿತ ವಿಭಾಗೀಯ ಕಾರ್ಯಪಾಲಕ ಅಭಿಯಂತರವರಿಂದ ಪಡೆಯಲಾಗುವುದು. | 2.00 | ಉಪ ನಿರ್ದೇಶಕರು |
| 5 | ಪ್ರಾಧಿಕಾರದ ಉದ್ದೇಶೀತ ಬಡಾವಣೆಯ ನಿವೇಶನವಾಗಿದ್ದಲ್ಲಿ ಅದರ ಸಂಪೂರ್ಣ ಮಾಹಿತಿಯನ್ನು ಹಂಚಿಕೆ ವಿಭಾಗದವರು ಉಪ ನಿರ್ದೇಶಕರು, ನಗರ ಯೋಜನೆ ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸುವರು. | 2.00 | ಉಪ ಕಾರ್ಯದರ್ಶಿ |
| 6 | ಪ್ರಾಧಿಕಾರದಿಂದ ಮಂಜೂರು ಮಾಡಿದ ಖಾಸಗಿ ಬಡಾವಣೆಯಾಗಿದ್ದಲ್ಲಿ, ಮಂಜೂರಾತಿಯಾಗಿರುವ ಮಾಹಿತಿಯನ್ನು ಸಂಬಂಧಿತ ವಿಭಾಗೀಯ ಕಾರ್ಯಪಾಲಕ ಅಭಿಯಂತರವರು ಉಪ ನಿರ್ದೇಶಕರು, ನಗರ ಯೋಜನಾ ವಿಭಾಗದವರಿಗೆ ಕಳುಹಿಸುವರು. | 2.00 | ಕಾರ್ಯನಿರ್ವಾಹಕ ಅಭಿಯಂತರರು |
| 7 | ಪ್ರಾಧಿಕಾರದ ಹಂಚಿಕೆ ವಿಭಾಗ / ವಿಭಾಗೀಯ ಕಾರ್ಯಪಾಲಕ ಅಭಿಯಂತರವರ ವಿಭಾಗದಿಂದ ಸ್ವೀಕೃತವಾದ ಮಾಹಿತಿಯನ್ನು ಆಧರಿಸಿ, ವಲಯ ನಿಯಮಗಳಿಗನುಸಾರವಾಗಿ ಅರ್ಜಿದಾರರ ಉಪ ವಿಭಜನೆ/ಸಮಾಮೇಲನಾ ಕೋರಿಕೆಯ ಪ್ರಸ್ತಾವನೆಯನ್ನು ನಗರ ಯೋಜನಾ ಸದಸ್ಯರ ಅನುಮೋದನೆಗಾಗಿ ಸಲ್ಲಿಸುವರು. | 2.00 | ಉಪ ನಿರ್ದೇಶಕರು |
| 8 | ನಗರ ಯೋಜನಾ ಸದಸ್ಯರು ಅನುಮೋದಿಸಿ, ಅರ್ಜಿಯನ್ನು ಉಪ ನಿರ್ದೇಶಕರು, ನಗರ ಯೋಜನೆ ಇವರಿಗೆ ಕಳುಹಿಸುವರು. | 2.00 | ನಗರ ಯೋಜನಾ ಸದಸ್ಯರು |
| 9 | ನಗರ ಯೋಜನಾ ಸದಸ್ಯರ ಅನುಮೋದನೆಯ ನಂತರ ನಗರ ಯೋಜಕರು ಅರ್ಜಿದಾರರಿಗೆ ನಿಗದಿತ ಶುಲ್ಕ ಪಾವತಿಗಾಗಿ ಹಿಂಬರಹವನ್ನು ನೀಡುವರು. | 2.00 | ನಗರ ಯೋಜಕರು |
| 10 | ಅರ್ಜಿದಾರರು ನಿಗದಿತ ಶುಲ್ಕವನ್ನು ಪ್ರಾಧಿಕಾರ ಸೂಚಿಸಿದ ಬ್ಯಾಂಕಿನಲ್ಲಿ ಪಾವತಿಸಿ, ಸ್ವೀಕೃತಿಯ ಪ್ರತಿಯನ್ನು ಪದನಿಮಿತ್ತ/ ಸಂಬಂಧಪಟ್ಟ ನಗರ ಯೋಜನಾ ಅಧಿಕಾರಿ ಇವರಿಗೆ ಸಲ್ಲಿಸಬೇಕು. | 2.00 | ನಗರ ಯೋಜಕರು |
| 11 | ಅರ್ಜಿದಾರರು ಪಾವತಿಸಿದ ನಿಗದಿತ ಶುಲ್ಕದ ಪಾವತಿ ಪರಿಶೀಲನೆಗಾಗಿ ಆರ್ಥಿಕ ವಿಭಾಗಕ್ಕೆ ಅರ್ಜಿಯನ್ನು ಕಳುಹಿಸಲಾಗುವುದು. | 1.00 | ಇತರೆ |
| 12 | ಆರ್ಥಿಕ ಸದಸ್ಯರು, ಕ್ರೆಡಿಟ್ ಪರಿಶೀಲನಾ ವಿಭಾಗದಲ್ಲಿ ಪರಿಶೀಲಿಸಲಾಗುವುದು. | 2.00 | ಇತರೆ |
| 13 | ಸ್ವೀಕೃತ ಶುಲ್ಕದ ಪಾವತಿಯ ಪರಿಶೀಲನೆಯ ನಂತರ ನಗರ ಯೋಜನಾ ಸದಸ್ಯರು, ಭೂ ವಿಭಜನೆ/ಸಮಾಮೇಲನ ಪ್ರಸ್ತಾವನೆಯನ್ನು ಅನುಮೋದಿಸುವರು. | 5.00 | ನಗರ ಯೋಜನಾ ಸದಸ್ಯರು |
| 14 | ನಗರ ಯೋಜನಾ ಸದಸ್ಯರು, ಭೂ ವಿಭಜನೆ/ಸಮಾಮೇಲನ ಅಧಿಕೃತ ಆದೇಶದ ಪ್ರತಿಯನ್ನು ನಗರ ಯೋಜಕರು ನೋಂದಾಯಿತ ಅಂಚೆ ಮುಖಾಂತರ ಅರ್ಜಿದಾರರಿಗೆ ಕಳುಹಿಸುವರು. | 1.00 | ನಗರ ಯೋಜಕರು |

Printed On : 21/02/ 2018 14:52